ಸಿ ಸಿ 1208/2019

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 09.08.2023

ಪಾಟೀ ಸವಾಲುಃ- ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮತ್ತು ಮರದ ವ್ಯಾಪಾರ ಮಾಡುತ್ತೇನೆ. ಮರದ ವ್ಯಾಪಾರವನ್ನು ಮಾಡಲು ನಾನು ಪರವಾನಗಿ ತೆಗೆದುಕೊಂಡಿಲ್ಲ. ನಾನು ಡೈರಿ ಕಾರ್ಡ್ ಮಾಡಿಸಿಲ್ಲ. ನಾನು ಸುಮಾರು 20 ವರ್ಷಗಳಿಂದ ಬಿ ಪಿ ಎಲ್ ಕಾರ್ಡ್ ಮಾಡಿಸಿ ಪಡಿತರ ಪಡೆಯುತ್ತಿದ್ದೇನೆ. ನನ್ನ ತಾಯಿಯ ಹೆಸರಿನಲ್ಲಿ ಜಮೀನು ಇರುತ್ತದೆ. ನನ್ನ ಹೆಸರಿನಲ್ಲಿ ಜಮೀನು ಇಲ್ಲ. ನನ್ನ ತಾಯಿಯ ಹೆಸರಿನಲ್ಲಿರುವ ಜಮೀನಿನ ಮೇಲೆ ಬೆಳೆ ಸಾಲ 1,00,000/- ರೂಪಾಯಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಸಾಲವು ತೀರುವಳಿ ಆಗಿಲ್ಲ, ನವೀಕರಣ ಮಾಡಿಕೊಂಡು ಹೋಗುತ್ತಿದ್ದೇವೆ. ಬೆಳೆ ಸಾಲ ಹೊರತುಪಡಿಸಿ ಬೇರೆ ಯಾವುದೇ ಸಾಲ ಮಾಡಿಲ್ಲ.

ಆರೋಪಿಯ ಇನಿಶಿಯಲ್ ನನಗೆ ಗೊತ್ತಿಲ್ಲ. ಆರೋಪಿಯ ತಂದೆಯ ಹೆಸರು ನಾರಾಯಣಸ್ವಾಮಿ. ಆರೋಪಿಯು ಹಿರಿಸಾವೆಯ ಬೆಳಗೊಳ ರಸ್ತೆಯಲ್ಲಿ ವಾಸವಿದ್ದಾರೆ. ಆರೋಪಿಯ ಮನೆಗೆ ನಾನು 2-3 ಬಾರಿ ಹೋಗಿರುತ್ತೇನೆ. ಆರೋಪಿಯ ಹೆಂಡತಿಯ ಹೆಸರು ಜ್ಯೋತಿ, ತಾಯಿಯ ಹೆಸರು ಲಕ್ಷ್ಮಮ್ಮ. ಆರೋಪಿಯು ನನಗೆ ಹಿರಿಸಾವೆಯಲ್ಲಿ ಪರಿಚಯ, ಸಾಕ್ಷಿ ಮುಂದುವರೆದು ಹೋಗಿ ಬರುವ ದಾರಿಯಲ್ಲಿ ಪರಿಚಯ. ಈ ವ್ಯವಹಾರವನ್ನು ಹೊರತುಪಡಿಸಿ ಆರೋಪಿ ಜೊತೆ ಬೇರೆ ವ್ಯವಹಾರ ಮಾಡಿಲ್ಲ. ನಾನು ಬ್ಯಾಂಕ್ ನಲ್ಲಿ 10,000 ರಿಂದ 20,000 ರವರೆಗೆ ವ್ಯವಹಾರ ಮಾಡುತ್ತೇನೆ. ದಾಸಿನಕೆರೆಯಿಂದ ಹಿರಿಸಾವೆಗೆ 6 ಕಿ.ಮಿ. ಅಂತರವಿದೆ. ಆರೋಪಿಗೆ ಹಣ ನೀಡಿದ 2 ವರ್ಷದ ಪೂರ್ವದಲ್ಲಿ ಆರೋಪಿ ನನಗೆ ಪರಿಚಯ. ಆರೋಪಿ ಎಲ್ಲಿಯವರೆಗೆ ಓದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅವರು ಶಿಕ್ಷಕರು ಎನ್ನುತ್ತಾರೆ. ಆರೋಪಿಯು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಎಷ್ಟು ಆಸ್ತಿಯಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಹಲಸಂದ್ರ ಪ್ರಾಥಮಿಕ ಶಾಲೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ಶಿಕ್ಷಕರಾಗಿದ್ದಾರೆ, ಯಾವ ಹೋಬಳಿ

ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ಆರೋಪಿಯು 2019ರ ಮೇ ತಿಂಗಳ ಕೊನೆಯ ವಾರದಲ್ಲಿ ನನ್ನಿಂದ ಹಣ ಕೇಳಿರುತ್ತಾರೆ, ದಿನಾಂಕ ಮತ್ತು ವಾರ ನನಗೆ ನೆನಪಿಲ್ಲ. ಆರೋಪಿಯು ಕರೆ ಮಾಡಿ ನನ್ನಿಂದ ಹಣ ಕೇಳಿರುತ್ತಾರೆ. ಆರೋಪಿಯ ಮೊಬೈಲ್ ಸಂಖ್ಯೆ ಈಗ ನನ್ನ ಬಳಿ ಇಲ್ಲ. ಮೊದಲು ಅವರ ಮೊಬೈಲ್ ಸಂಖ್ಯೆ ಇತ್ತು. ಮೊಬೈಲ್ ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿಯು ಹಣ ಕೇಳಿದಾಗ ನಾನು ಹಿರಿಸಾವೆಯಲ್ಲಿದೆ, ಆರೋಪಿ ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಸ್ವಲ್ಪ ತೊಂದರೆಯಿದೆ ಎಂದು ನನ್ನ ಬಳಿ ಹಣ ಕೇಳಿರುತ್ತಾರೆ, ಏನು ತೊಂದರೆ ಎಂದು ನಾನು ಕೇಳಿಲ್ಲ. ಆರೋಪಿಯನ್ನು ಹೊರತುಪಡಿಸಿ ನಾನು ಬೇರೆ ಯಾರಿಗೂ ಹಣ ನೀಡಿಲ್ಲ. ಆರೋಪಿಯು ಹಣ ಕೇಳಿದಾಗ ನಾನು ಹಣ ಇಲ್ಲವೆಂದು ಹೇಳಿರುತ್ತೇನೆ. ಆರೋಪಿಗೆ ಹಣವನ್ನು ಅವರ ಮನೆಗೆ ಹೋಗಿ ನೀಡಿರುತ್ತೇನೆ. ಆರೋಪಿಯ ಮನೆ ಎಷ್ಟು ಅಂತಸ್ಥಿನ ಮನೆ ಎಂದು ಹೇಳಲು ಆಗುವುದಿಲ್ಲ. ಆರೋಪಿಯ ಮನೆಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಹಣವನ್ನು ನೀಡುವ ಪೂರ್ವದಲ್ಲಿ ನಾನು ಎರಡು ಬಾರಿ ಆರೋಪಿಯ ಮನೆಗೆ ಹೋಗಿದ್ದೆ. ಹಣ ಕೊಟ್ಟ ನಂತರ ಹಲವಾರು ಬಾರಿ ಆರೋಪಿಯ ಮನೆಗೆ ಹೋಗಿದ್ದೆನು. ಆರೋಪಿಯ ಮನೆಯಲ್ಲಿ ಎಷ್ಟು ಕೋಣೆಗಳಿವೆ ಮತ್ತು ಹಾಲ್ ಮತ್ತು ಒರಾಂಡ ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ. ಆರೋಪಿಯು ಸಾಲ ಕೇಳಿದ ನಂತರ ನಾನು ಹಣ ಕೊಡುವ ಪೂರ್ವದಲ್ಲಿ ಆರೋಪಿಯನ್ನು ಹಿರಿಸಾವೆಯಲ್ಲಿ ಭೇಟಿಯಾಗಿದ್ದೆನು. ಆರೋಪಿಯು ಸಂಜೆ 05.30 ಗಂಟೆಗೆ ಕರೆ ಮಾಡಿ ಹಣ ಕೇಳಿರುತ್ತಾರೆ. ಆರೋಪಿಗೆ ಹಣ ನೀಡಿದಾಗ ಸಂಜೆ ಸುಮಾರು 06.30-07.30 ಗಂಟೆ ಸಮಯ ಆಗಿತ್ತು. ಹಣ ನೀಡಿದ ಸಂದರ್ಭದಲ್ಲಿ ಆರೋಪಿಯ ಪತ್ನಿ ಇದ್ದರು. ಆರೋಪಿಯು 3 ತಿಂಗಳ ನಂತರ ಹಣ ವಾಪಸ್ಸು ನೀಡುತ್ತೇನೆ ಎಂದು ಹೇಳಿರುತ್ತಾರೆ. ನಾನು ನೀಡಿದ ಹಣಕ್ಕೆ ಬಡ್ಡಿ ಮಾತುಕತೆ ನಡೆದಿಲ್ಲ. ಆರೋಪಿಯು ನನಗೆ ರಕ್ತ ಸಂಬಂಧಿಯಲ್ಲ, ಸ್ನೇಹಿತ. ಆರೋಪಿಗೆ ನೀಡಿದ 4,00,000/- ಹಣ ನನ್ನ ಮನೆಯಲ್ಲಿತ್ತು . 2 ಹಸು ಮಾರಿದ 1,50,000/- ಹಣ ಮತ್ತು ಟೋಮ್ಯಾಟೋ ಮಾರಾಟ ಮಾಡಿದ ಹಣ ಒಟ್ಟು ಸೇರಿಸಿ ಆರೋಪಿಗೆ ನೀಡಿರುತ್ತೇನೆ. 20,000/- ರೂಪಾಯಿಗಿಂತ ಮೇಲ್ಪಟ್ಟ

ಹಣವನ್ನು ನೀಡಬೇಕಾದರೆ ಚೆಕ್ ಮೂಲಕವೇ ನೀಡಬೇಕು ಎಂಬ ನಿಯಮವಿದೆ ಎಂದು ನನಗೆ ಗೊತ್ತು. ಆರೋಪಿಗೆ 500 ರೂಪಾಯಿ ಮುಖ ಬೆಲೆಯ ಹೊಸ ನೋಟುಗಳನ್ನು ನೀಡಿರುತ್ತೇನೆ.

ಆರೋಪಿಯು ಹಣ ನೀಡಿದ ದಿನವೇ ನನಗೆ ನಿ ಪಿ 1 ನ್ನು ನೀಡಿರುತ್ತಾರೆ. ನಿ ಪಿ 1 ರಲ್ಲಿರುವ ಬರವಣಿಗೆಯನ್ನು ಆರೋಪಿಯೇ ಮಾಡಿರುತ್ತಾರೆ. ಎಲ್ಲಾ ಬರವಣಿಗೆಗಳನ್ನು ಒಂದೇ ದಿನ ಬರೆದಿರುತ್ತಾರೆ. ಹಣ ನೀಡಿದ ದಿನ ನನ್ನ ಬ್ಯಾಂಕ್ ಖಾತಾ ಪುಸ್ತಕವನ್ನು ಆರೋಪಿ ಮನೆಗೆ ತೆಗೆದುಕೊಂಡು ಹೋಗಿಲ್ಲ. ನನ್ನ ಬ್ಯಾಂಕ್ ಖಾತಾ ಸಂಖ್ಯೆ ನನಗೆ ಗೊತ್ತಿಲ್ಲ ಮತ್ತು ಆರೋಪಿಗೂ ಗೊತ್ತಿಲ್ಲ. ನನ್ನ ಬ್ಯಾಂಕ್ ಖಾತಾ ಸಂಖ್ಯೆಯನ್ನು ನಿ ಪಿ 1 ರಲ್ಲಿ ಬರೆದಿಲ್ಲ. ಆರೋಪಿ ನನಗೆ ನಿ ಪಿ 1 ನ್ನು ನೀಡಿದ ಸಂದರ್ಭದಲ್ಲಿ ನಾನು ಒಬ್ಬನೇ ಇದ್ದೆ. ಆರೋಪಿ ನೀಡಿದ ಚೆಕ್ ಸಂಖ್ಯೆ 495035 ಇರುತ್ತದೆ. ನಿ ಪಿ 1 ಎಸ್ ಬಿ ಐ ಬ್ಯಾಂಕ್ ಗೆ ಸೇರಿದ್ದು ಆಗಿರುತ್ತದೆ. ನಿ ಪಿ 1 ರಲ್ಲಿರುವ ಸಹಿ ಮತ್ತು ಇತರೆ ಬರವಣಿಗೆಗಳು ಬೇರೆ ಬೇರೆ ಶಾಹಿಯಲ್ಲಿ ಬರೆದಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಚೆಕ್ ನ್ನು ನೀಡಿದ ನಂತರ ನಾನು ಆರೋಪಿಯನ್ನು 2 ಬಾರಿ ಅವರ ಮನೆಯ ಬಳಿ ಹೋಗಿ ಮತ್ತು ದಾರಿಯಲ್ಲಿ ಸಿಕ್ಕಾಗ ಕೇಳಿರುತ್ತೇನೆ. ನಿ ಪಿ 1 ರ ಚೆಕ್ ನ್ನು ಬ್ಯಾಂಕ್ ಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ ಚಲನ್ ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ ಪಿ 1 ರ ಚೆಕ್ ನ್ನು ಬ್ಯಾಂಕ್ ಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ ಏನು ಹಿಂಬರಹ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚೆಕ್ ಅಮಾನ್ಯಗೊಂಡ ನಂತರ ಆರೋಪಿಯ ಮನೆಯ ವಿಳಾಸಕ್ಕೆ ನೋಟೀಸ್ ಕಳುಹಿಸಿರುತ್ತೇನೆ. ಸದರಿ ನೋಟೀಸ್ ಆರೋಪಿಗೆ ಜಾರಿಯಾಗಿರುತ್ತದೆ. ಚೆಕ್ ಅಮಾನ್ಯಗೊಂಡ ನಂತರ ಆರೋಪಿಯನ್ನು ನಾನು ಭೇಟಿ ಮಾಡಿದ್ದೆನು.

ಆರೋಪಿಗೆ 75 ರಿಂದ 80 ಸಾವಿರ ಸಂಬಳ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಕುಟುಂಬಕ್ಕೆ ಆಸ್ತಿಯಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆಎಷ್ಟು ವರ್ಷ ವಯಸ್ಸಾಗಿದೆ ಎಂದು ನನಗೆ ಗೊತ್ತಿಲ್ಲ. ಫಿರ್ಯಾದು ದಾಖಲು ಮಾಡುವ ಸಮಯದಲ್ಲಿ ಆರೋಪಿಗೆ ಎಷ್ಟು ವರ್ಷ ವಯಸ್ಸಾಗಿದೆ ಎಂದು ನಾನು ಹೇಳಿಲ್ಲ.

ಸಿ ಸಿ 1208/2019

ಪಿ ಡಬ್ಲ್ಯೂ-1

**ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.